ಶ್ರೀ ಡಿ. ಬಿ. ಚಂದ್ರೇಗೌಡ :– ಇದು ರಾಜ್ಯಾಂಗದಲ್ಲಿರತಕ್ಕ ದ್ವಂದ್ವ. ಇದನ್ನು ಯಾವಾಗ ಸರಿಪಡಿಸುತ್ತಾರೋ ಗೊತ್ತಿಲ್ಲ. ಇದು ಇರತಕ್ಕ ವ್ಯವಸ್ಥೆ. ಆದರೆ ಅದು ಸತ್ಯವೆಂದು ವಾದ ಮಾಡತಕ್ಕಂತಾದ್ದು ಇದೆ. ನಾನು ನಾನ್‌ಪ್ಲಾನ್ ಅಲೋಕೇಷನ್ಸ್ ಬಗ್ಗೆ ಹೇಳುತ್ತಿದ್ದೆ. 1989 ರಲ್ಲಿ 670 ಕೋಟಿ ರೂಪಾಯಿ ಸ್ಟೇಟ್ ಪ್ಲಾನ್‌ನಲ್ಲಿ 270, ಅದು 940 ಕೋಟಿ ರೂಪಾಯಿ ಅದೇ ರೀತಿ ದಾಮಾಶ ಹೇಳಿಕೊಂಡು ಬಂದು 1994–95 ಕ್ಕೆ 896 ಕೋಟಿ ನಾನ್‌ಪ್ಲಾನ್ ಎಕ್ಸ್‌ಪೆಂಡೀಚರ್, 476 ಕೋಟಿ ಸ್ಟೇಟ್ ಪ್ಲಾನ್ ಎಕ್ಸ್‌ಪೆಂಡೀಚರ್; ಇದನ್ನು 1370 ಕೋಟಿ ವರೆಗೆ ಏರಿಸಬೇಕೆಂದು ಹೊನ್ನಾವರ್ ಕಮೀಷನ್ ರಿಪೋರ್ಟ್‌ನಲ್ಲಿ ಹೇಳಿದೆ.

ಪ್ರಕಟಣೆ

ವಿಧಾನ ಸಭೆಯ ಪ್ರಸ್ತುತ ಅಧಿವೇಶನ ಮುಂದುವರಿಸುವುದು

ಅಧ್ಯಕ್ಷರು :– ತಾವು ತಮ್ಮ ಭಾಷಣವನ್ನು ಮಧ್ಯಾಹ್ನದ ನಂತರ ಮುಂದುವರೆಸಿ ದಿನಾಂಕ 19ನೇ ಡಿಸೆಂಬರ್‌ನಲ್ಲಿ ನಡೆದ ನಿಧಾನ ಸಭೆಯ ಕಾರ್ಯಕಲಾಪಗಳ ಸಲಹಾ ಸಮಿತಿಯು ಪ್ರಸ್ತುತ ಅಧಿವೇಶನವನ್ನು ಮುಂದುವರಿಸಿ, ಈ ಕೆಳಕಂಡಂತೆ ಕಾರ್ಯಕಲಾಪಗಳನ್ನು ನಡೆಸಲು ತೀರ್ಮಾನಿಸಿತು. 21ನೇ ಡಿಸೆಂಬರ್ ಶಾಸನ ರಚನೆ ಹಾಗೂ ಖಾಸಗಿ ಕಾರ್ಯಕಲಾಪಗಳು, ನಿಯಮ 68 ರ ಮೇರೆಗೆ ರೈತರ ಸಾಲ ಮನ್ನಾ ಮಾಡುವ ಬಗ್ಗೆ ಚರ್ಚಿಸುವುದು; 22, 23, 24 ಮತ್ತು 25 ರಂದು ಅಧಿವೇಶನ ಇರುವುದಿಲ್ಲ. 26, ಶಾಸನ ರಚನೆ, 27, ಶಾಸನ ರಚನೆ, 26 ಮತ್ತು 27 ರಂದು, ಈ ಎರಡು ದಿವಸಗಳಲ್ಲಿ ಪ್ರಶ್ನೋತ್ತರದ ಅವಧಿ ಇರುವುದಿಲ್ಲ.

ಈಗ ಸಭೆ ಮುಂದುವರೆದು ಮತ್ತೆ 3 ಗಂಟೆಗೆ ಸಮಾವೇಶಗೊಳ್ಳುತ್ತದೆ.

(ಸದನವು ಮಧ್ಯಾಹ್ನ 1–35ಕ್ಕೆ ಮುಕ್ತಾಯವಾಗಿ ಮತ್ತೆ 3 ಗಂಟೆಗೆ ಸಮಾವೇಶಗೊಳ್ಳಲು ನಿಶ್ಚಯಿಸಿತು.)

ಸದನವು ಮತ್ತೆ ಮಧ್ಯಾಹ್ನ 3–20 ಕ್ಕೆ ಸಮಾವೇಶಗೊಂಡಿತು.

(ಉಪಾಧ್ಯಕ್ಷರು ಶ್ರೀಮತಿ ನಾಗಮ್ಮ ಕೇಶವಮೂರ್ತಿ ಅಧ್ಯಕ್ಷ ಸ್ಥಾನವನ್ನು ಅಲಂಕರಿಸಿದರು)

ಶಾಸನ ರಚನಾ ಕಾರ್ಯಕಲಾಪಗಳು

ಜಿಲ್ಲಾಪರಿತ್, ಮಂಡಲ್ ಪಂಚಾಯತ್ (ತಿದ್ದುಪಡಿ) ವಿಧೇಯಕ ಪರ್ಯಾಲೋಚಿಸುವುದು.

(ಮುಂದುವರಿದುದು)

Sri. D B. Chandregowda : Madam Deputy Speaker, I was referring to the earnestness of the previous Government reflected by appointing two Commissions, one Krishnaswamy's Committee report and the other was the Finance Commission which recommended the pattern and the range of a assistance that should be given to the Zilla Parishads and Mandal Panchayats.

ಈ ಎರಡು ವರದಿಗಳ ಆಧಾರದಿಂದ, ಅವು ಮಾಡಿರತಕ್ಕ ಒಂದು ರೆಕಮೆಂಡೇಷನ್ಸ್ ಈ ಬದಲಾವಣೆಗೆ ಆಧಾರವಾಗಿದ್ದರೆ ನಾನು ಇದನ್ನು ಸ್ವಾಗತ ಮಾಡುತ್ತಿದೆ ಎಂದು ಹೇಳುತ್ತಿದ್ದೆ. ಆದರೆ ಸರ್ಕಾರ ಈ ವರದಿಗಳನ್ನು ನೋಡುವುದಕ್ಕೆ ಸಿದ್ಧವಾಗಿಲ್ಲ ಎನ್ನುವುದನ್ನು ಸ್ಪಷ್ಟವಾಗಿ ಮಾನ್ಯ ಮಂತ್ರಿಗಳು ಅಪ್ಪಣೆ ಕೊಡಿಸಿರುವುದರಿಂದ ಅದರ ಬಗ್ಗೆ ನಾನು ಹೆಚ್ಚು ವ್ಯಾಖ್ಯಾನಕ್ಕೆ ಈಗ ಹೋಗುವುದಿಲ್ಲ. ಆಗತ್ಯ ಬಿದ್ದಾಗ ಅದನ್ನು ಹೇಳುತ್ತೇನೆ. ರಾಜ್ಯ ಸರ್ಕಾರದಲ್ಲಿರತಕ್ಕ ವಿಕೇಂದ್ರೀಕೃತ ವ್ಯವಸ್ಥೆಗೆ ತರಲು ಹೊರಟ ತಿದ್ದುಪಡಿಗಳು ಈ ವರದಿಗೆ ಆಧಾರವಾಗಿಲ್ಲ; ಮುಖ್ಯವಾಗಿ ರಾಜಕೀಯವೇ ಕಾರಣವೆಂದು ನಾವು Without conradiction ಒಪ್ಪಿಕೊಳ್ಳಬೇಕಾಗುತ್ತದೆ. ಆದ್ದರಿಂದ ಹೊನ್ನಾವರ್ ಸಮಿತಿ ಬಗ್ಗೆ ಆಗಲಿ ಕೃಷ್ಣಸ್ವಾಮಿ ಸಮಿತಿ ಬಗ್ಗೆ ಆಗಲಿ ನಾನು ವಿಸ್ತಾರವಾಗಿ ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ಒಂದು ವೇಳೆ ಅವು ಆಧಾರವಾಗದಿದ್ದರೆ ಕನಿಷ್ಟಪಕ್ಷ ಮಾನ್ಯ ಮಂತ್ರಿಗಳು ಏನು ಹೇಳಿದರು, ನಮ್ಮ ನಾಯಕರು, ನಮ್ಮ ಪಕ್ಷದ ಆದೇಶದ ಮೇಲೆ ಈ ತಿದ್ದುಪಡಿಯನ್ನು ತಂದಿದ್ದೇವೆ; ಅದಕ್ಕೆ ಅನುಗುಣವಾಗಿ ತಂದಿದ್ದೇವೆ ಮತ್ತು ಅದನ್ನು ಬಿಟ್ಟು ನಾವು ಈ ತಿದ್ದುಪಡಿ ಮಸೂದೆ ಮಂಡನೆ ಮಾಡಿಲ್ಲ ಎಂದು ಏನು ಹೇಳಿದ್ದಾರೆ. ಅದಕ್ಕಾಗಿ ಹಿಂದಿನ ಪ್ರಧಾನ ಮಂತ್ರಿಗಳು ಇಂದಿನ ಗೌರವಾನ್ವಿತ ಕಾಂಗ್ರೆಸ್ (ಐ) ಪಕ್ಷದ ಅಧ್ಯಕ್ಷರು ಈ ಸಂಬಂಧ ಏನು ಹಿಂದೆ ಹೇಳಿದ್ದಾರೆ ಎನ್ನುವುದನ್ನು ಈ